**ಅತ್ಯಾಧ್ಯತೆ**

ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

**ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು – 560 001**

ಸಂಖ್ಯೆ: ಸಶಿಅ/ಒಒಎಸ್‌ಸಿ/ಚಿ.ಅಂ/ವಿ.ತ.ಕಾ/ಸುತ್ತೋಲೆ/2012–13/2013–14 ದಿನಾಂಕ: 17.04.2013

# ಪರಿಷ್ಕೃತ ಸುತ್ತೋಲೆ

ವಿಷಯ: ಆರ್.ಟಿ.ಇ – 2009 ಅಡಿಯಲ್ಲಿ 2013ನೇ ಸಾಲಿನ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ವಿಶೇಷ ತರಬೇತಿ ಕಾರ್ಯಕ್ರಮ (ಮೂರು ತಿಂಗಳ ಚಿಣ್ಣರ ಅಂಗಳ) ನಡೆಸುವ ಬಗ್ಗೆ.

ಉಲ್ಲೇಖ: 1) 2013–14ನೇ ಸಾಲಿನ ಪಿ.ಎ.ಬಿ.ಯಲ್ಲಿ ಅನುಮೋದಿಸಿದಂತೆ

2) ಆರ್.ಟಿ.ಇ. 2009ರನ್ವಯ

3) ಸಂಖ್ಯೆ: ಸಶಿಅ/ಒಒಎಸ್‌ಸಿ/ಚಿ.ಅಂ/ವಿ.ತ.ಕಾ/ಸುತ್ತೋಲೆ/2012–13/2013–14 ದಿನಾಂಕ: 06.03.2013

**********

ಉಲ್ಲೇಖ 3ರಲ್ಲಿರುವ ಸುತ್ತೋಲೆಯಲ್ಲಿ ದಿನಾಂಕ: 15.04.2013ರಿಂದ ಪ್ರಾರಂಭವಾಗಲಿರುವ ಚಿಣ್ಣರ ಅಂಗಳ 3 ತಿಂಗಳ ವಿಶೇಷ ತರಬೇತಿ (ವಸತಿರಹಿತ ಮತ್ತು ವಸತಿಸಹಿತ) ಕೇಂದ್ರಗಳನ್ನು ನಡೆಸುವ ಬಗ್ಗೆ ವಿವರವಾದ ಸೂಚನೆಗಳನ್ನು ನೀಡಲಾಗಿದೆ. ಉಲ್ಲೇಖ 1 ರಲ್ಲಿ ಸೂಚಿಸಿರುವಂತೆ 3 ತಿಂಗಳ ವಸತಿರಹಿತ ಮತ್ತು ವಸತಿಸಹಿತ ವಿಶೇಷ ತರಬೇತಿ ಕೇಂದ್ರಗಳ ಘಟಕ ವೆಚ್ಚವನ್ನು ಈ ಕೆಳಗಿನಂತೆ ಪರಿಷ್ಕರಿಸಿ ಆದೇಶಿಸಿದೆ.

**ಘಟಕ ವೆಚ್ಚ ಮರು ಹಂಚಿಕೆ**

| ಘಟಕ ವೆಚ್ಚದ ಮರು ಹಂಚಿಕೆ (ಪ್ರತಿ ಮಗುವಿನ ಘಟಕ ವೆಚ್ಚ 3 ತಿಂಗಳ ಅವಧಿಗೆ) | | |
|---|---|---|
| ವಿವರ | ವಸತಿ ರಹಿತ ಚಿಣ್ಣರ ಅಂಗಳ (ಪ್ರತಿ ಮಗುವಿಗೆ) | ವಸತಿಸಹಿತ ಚಿಣ್ಣರ ಅಂಗಳ (ಪ್ರತಿ ಮಗುವಿಗೆ) |
| ಸ್ವಯಂ ಸೇವಕರ ಗೌರವಧನ (ಗರಿಷ್ಟ ರೂ. 3000 ಒಬ್ಬರಿಗೆ ಮಾಸಿಕ) (ವಸತಿ ರಹಿತ ಕೇಂದ್ರಕ್ಕೆ – ಒಬ್ಬರು , ವಸತಿ ಸಹಿತ ಕೇಂದ್ರಕ್ಕೆ – ಇಬ್ಬರು ಸ್ವಯಂ ಸೇವಕರು) | 360.00 | 360.00 |
| ಸಹಾಯಕ (ಗರಿಷ್ಟ ರೂ. 2000 ಮಾಸಿಕ) | 0 | 120.00 |
| ಉಪಹಾರ/ಊಟ ( ದಿನಕ್ಕೆ 2 ಊಟ, 1 ಉಪಹಾರ ) | 0 | 2700.00 |
| ಲೇಖನ ಸಾಮಗ್ರಿ | 350.00 | 0 |
| ಕಲಿಕೆ ಬೋಧನೆ ಸಾಮಗ್ರಿ | 0 | 25.00 |
| ದೈನಂದಿನ ವಸ್ತುಗಳು (ಸೋಪು, ಕೊಬ್ಬರಿಎಣ್ಣೆ, ತಟ್ಟೆ, ಲೋಟ, ಮಗ್, ಬಕೇಟು, ಬ್ಯಾಗ್, ಸ್ಲಿಪ್ಪರ್ಸ್ (1 ಜೊತೆ), | 0 | 75.00 |
| ಸಾದಿಲ್ವಾರು | 10.00 | 20.00 |
| ಒಟ್ಟು ರೂ. | 720.00 | 3300.00 |

- 3 ತಿಂಗಳ ವಿಶೇಷ ತರಬೇತಿ ಕೇಂದ್ರಗಳನ್ನು ನಡೆಸುವ ಸಂಬಂಧ ಅನುದಾನವನ್ನು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರು ಸಕಾಲದಲ್ಲಿ ಬ್ಲಾಕ್ ಹಂತದ ಅಧಿಕಾರಿಗಳಿಗೆ ಹಾಗೂ ಬ್ಲಾಕ್‌ಗಳಿಂದ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ ಹಾಗೂ ಮುಖ್ಯಶಿಕ್ಷಕರ ಜಂಟಿ ಖಾತೆಗೆ ಸಕಾಲದಲ್ಲಿ ಬಿಡುಗಡೆಗೊಳಿಸಿ ಕೇಂದ್ರಗಳನ್ನು ನಡೆಸಲು ವ್ಯವಸ್ಥೆಗೊಳಿಸಬೇಕು.

- ಶಾಲೆಯ ಮುಖ್ಯಶಿಕ್ಷಕರು ಕೇಂದ್ರ ನಿರ್ವಹಣೆಗೆ ಬೇಕಾದ ಅಗತ್ಯ ಸಾಮಗ್ರಿಗಳನ್ನು ಕೇಂದ್ರಗಳಿಗೆ ಒದಗಿಸಲು ತಿಳಿಸುವುದು. ಖರ್ಚು ಮಾಡಿದ ವಿವರಗಳಿಗೆ ನಿಯಮಾನುಸಾರ ಲೆಕ್ಕ ಪತ್ರ ನಿರ್ವಹಿಸುವ ಹೊಣೆ ಸಿ.ಆರ್.ಪಿ ಹಾಗೂ ಮುಖ್ಯಶಿಕ್ಷಕರದ್ದಾಗಿರುತ್ತದೆ. ಕೇಂದ್ರಗಳು ಸಮರ್ಪಕವಾಗಿ ನಡೆಯುವಂತೆ ಮುಖ್ಯಶಿಕ್ಷಕರು ಕೇಂದ್ರದಲ್ಲಿದ್ದು, ಉಸ್ತುವಾರಿಯನ್ನು ಕ್ರಮಬದ್ಧವಾಗಿ ನಿರ್ವಹಿಸಬೇಕು.

**ವಿಶೇಷ ಸೂಚನೆ:**

⇒ 2013–14ನೇ ಸಾಲಿನಲ್ಲಿ ಗುರುತಿಸಿರುವ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಹೊರತುಪಡಿಸಿ ಯಾವುದೇ ಕಾರಣಕ್ಕೂ ಶಾಲೆಗೆ ಹೋಗುತ್ತಿರುವ, ನಿಧಾನಕಲಿಕೆ ಮಕ್ಕಳನ್ನು ಸೇರಿಸಿಕೊಳ್ಳುವಂತಿಲ್ಲ.

⇒ ವಿಶೇಷ ತರಬೇತಿಗೆ ಒಳಪಡುವ ಮಕ್ಕಳನ್ನು ಮೊದಲು ಮಗುವಿನ ನೆರೆಹೊರೆಯ ಶಾಲೆಗೆ ದಾಖಲು ಮಾಡಿಸುವುದು ಕಡ್ಡಾಯ.

⇒ ವಿಶೇಷ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸುವ ಮುನ್ನ ಪ್ರಚಾರ ನೀಡುವುದು.

⇒ ಕೇಂದ್ರಕ್ಕೆ ದಾಖಲಾಗುವ ಮಕ್ಕಳಿಗೆ ನಿಯಮಾನುಸಾರ ಸೌಲಭ್ಯಗಳನ್ನು ಒದಗಿಸುವುದು.

⇒ ಪ್ರತಿ ಮಗುವಿನ ಐ.ಇ.ಪಿ. ಹಾಗೂ ಕಲಿಕಾ ಪ್ರಗತಿಯನ್ನು ಪ್ರತಿ ತಿಂಗಳು ದಾಖಲಿಸುವುದು.

⇒ ಘಟಕ ವೆಚ್ಚದಲ್ಲಿ ನಮೂದಿಸಿರುವ ಎಲ್ಲಾ ಅಂಶಗಳನ್ನು ಪಾಲಿಸುವುದು.

⇒ ಕೇಂದ್ರ ನಡೆಸಿದ ಬಗ್ಗೆ ದಾಖಲಿಕರಣವನ್ನು ನಿರ್ವಹಿಸಿ ನಿಗದಿಪಡಿಸಿದ ದಿನಾಂಕದೊಳಗೆ ಸಲ್ಲಿಸುವುದು.

⇒ ಕೇಂದ್ರ ನಡೆಯುವ ಶಾಲೆಯ ಮುಖ್ಯಶಿಕ್ಷಕರು, ಶಿಕ್ಷಕರು, ಪೂರ್ಣ ಜವಾಬ್ದಾರಿಯಿಂದ ನಿರ್ವಹಿಸುವುದು.

⇒ ಇಲಾಖಾ ಅಧಿಕಾರಿಗಳು ಕೇಂದ್ರಗಳಿಗೆ ಭೇಟಿ ನೀಡಿ ಸೂಕ್ತ ಮಾರ್ಗದರ್ಶನ ನೀಡಿ, ಕುಂದುಕೊರತೆಗಳನ್ನು ನಿವಾರಿಸಿ ಯಾವುದೇ ರೀತಿ ಲೋಪ ಬಾರದಂತೆ ಗಮನಹರಿಸುವುದು.

⇒ ಪ್ರತಿ ತಿಂಗಳು ಮಾಹಿತಿಯನ್ನು ರಾಜ್ಯ ಕಛೇರಿಗೆ ಸಲ್ಲಿಸುವುದು.

**[ಕರಡು ಪ್ರತಿ ಮಾನ್ಯ ರಾಜ್ಯ ಯೋಜನಾ ನಿರ್ದೇಶಕರಿಂದ ಅನುಮೋದಿಸಲ್ಪಟಿದೆ]**

Nanih

ಸಹ ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ,
ಬೆಂಗಳೂರು

ಕ್ರಮಕ್ಕಾಗಿ

1. ರಾಜ್ಯದ ಎಲ್ಲಾ ಡಿಡಿಪಿಐ ಮತ್ತು ಡಿವೈಪಿಸಿ ಯವರಿಗೆ
2. ರಾಜ್ಯದ ಎಲ್ಲಾ ಬಿ.ಇ.ಒ/ಬಿಆರ್.ಸಿ ಯವರಿಗೆ. ಈ ಪತ್ರ ತಲುಪಿದ ಕೂಡಲೇ ಸಿ.ಆರ್.ಪಿ/ಮುಖ್ಯಶಿಕ್ಷಕರ ಸಭೆ ಕರೆದು ಬ್ಲಾಕ್ ಯೋಜನೆ ಸಿದ್ಧಪಡಿಸಬೇಕು ಹಾಗೂ ಸುತ್ತೋಲೆಯ ಪ್ರತಿಗಳನ್ನು ಒದಗಿಸಬೇಕು.

**ಮಾಹಿತಿಗೆ ಮತ್ತು ಕ್ರಮಕ್ಕಾಗಿ**

1. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ
2. ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಧಾರವಾಡ. ಪ್ರಾಥಮಿಕ ಶಿಕ್ಷಣ ಬೆಂಗಳೂರು–ಡಿಎಸ್ಇಆರ್‌ಟಿ ಬೆಂಗಳೂರು, ಅಲ್ಪಸಂಖ್ಯಾತ ಭಾಷೆಗಳು. ಸರ್ವ ಶಿಕ್ಷಣ ಅಭಿಯಾನ–ಬೆಂಗಳೂರು.
3. ಸಹನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಬೆಳಗಾವಿ, ಗುಲ್ಬರ್ಗಾ, ಮೈಸೂರು, ಎಸಿಪಿಐ ಕಛೇರಿ ಧಾರವಾಡ/ಗುಲ್ಬರ್ಗಾ. ಪ್ರಿನ್ಸಿಪಾಲರು ಸಿಟಿಇ – ಮೈಸೂರು, ಮಂಗಳೂರು – ಚಿತ್ರದುರ್ಗ – ಗುಲ್ಬರ್ಗಾ , ಜಮಖಂಡಿ, ಮತ್ತು ಬೆಳಗಾವಿ.
4. ಈ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಹಾಗೂ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಅನುಪಾಲನಾ ಕ್ರಮಕ್ಕಾಗಿ
5. ರಾಜ್ಯದ ಎಲ್ಲಾ ಡಿಡಿಪಿಐ ಅಭಿವೃದ್ಧಿ – ಡಯಟ್ ಸಂಸ್ಥೆ.
6. ಸರ್ಕಾರದಿಂದ ನೇಮಿಸಲಾಗಿರುವ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಅನುಪಾಲನಾ ಕ್ರಮಕ್ಕಾಗಿ

**ಮಾಹಿತಿಗಾಗಿ ಸಲ್ಲಿಸಿದೆ.**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.